# ಶಿಕ್ಷಾ: ಮೈ ಎಕ್ಸ್‌ಪೆರಿಮೆಂಟ್ಸ್ ಆ್ಯಸ್ ಆ್ಯನ್ ಎಜುಕೇಷನ್ ಮಿನಿಸ್ಟರ್ | ಪುಸ್ತಕ ವಿಮರ್ಶೆ

ಪ್ರೇಮಾ ರಘುನಾಥ್

ಈ ಪುಸ್ತಕವು ಆಮ್ ಆದ್ಮಿ ಪಕ್ಷದ ಮೊದಲ ಅಧಿಕಾರಾವಧಿಯಡಿ ದೆಹಲಿ ಸರಕಾರವು ಜಾರಿಗೆ ತಂದ ಶಿಕ್ಷಣ ನೀತಿಯ ಸ್ಥೂಲ-ಚಿತ್ರಣವನ್ನು ಕೊಡುತ್ತದೆ.

ಸಾರ್ವತ್ರಿಕ ಭಾಗವಹಿಸುವಿಕೆಯನ್ನು ಉತ್ತೇಜಿಸುವ ಒಂದು ಸಂಗತಿಯಾಗಿ ಶಿಕ್ಷಣವು, ಅಭಿಪ್ರಾಯ ಅಥವಾ ಆಕ್ರೋಶದ ರೂಪದಲ್ಲಿ, ಇಂದು ಮತ್ತು ಇನ್ನು ಮುಂದೆಯೂ ಮುಂದುವರಿಯುತ್ತದೆ. ಪ್ರತಿಯೊಬ್ಬರಿಗೂ, ಏನನ್ನು ಕಲಿಸಬೇಕು, ಹೇಗೆ, ಯಾವಾಗ ಮತ್ತು ಯಾಕೆ ಎಂಬ ಅಭಿಪ್ರಾಯಗಳು ಇರುತ್ತವೆ. ಶಾಲೆಗಳು ತಮ್ಮ ಯಶಸ್ಸಿನ ಪ್ರಮಾಣವನ್ನು ಜಾಹೀರಾತು ಮಾಡುತ್ತವೆ ಮತ್ತು ಈ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳಿಗೆ ಏನಾಗಬಹುದೆಂಬ ಅರಿವು ಅಥವಾ ಕಾಳಜಿಯನ್ನು ಹೊಂದದೆ, ಕೆಲವು ಶಾಲೆಗಳು 'ನೂರಕ್ಕೆ ನೂರು ಫಲಿತಾಂಶ' ತೆಗೆಯುವ ತಮ್ಮ ಸಾಮರ್ಥ್ಯದಿಂದ ಇತರ ಶಾಲೆಗಳಿಗಿಂತ ಹೆಚ್ಚು ಪ್ರಸಿದ್ಧಿ ಪಡೆಯುತ್ತವೆ.

ಆದರೂ, ಒಂದು ದೇಶದ ಅಥವಾ ಯಾವುದೇ ದೇಶದ ಶಿಕ್ಷಣ ವ್ಯವಸ್ಥೆಯ ಯಶಸ್ಸು ಅದರ ಶಿಕ್ಷಕರ ಕೈಯಲ್ಲಿದೆ. ಜೊತೆಗೆ ಶಿಕ್ಷಕರು ಪಡೆದ ಸಮನ್ವಯ ಮತ್ತು ಸಮಾನತೆಯ ಸಮಾಜವನ್ನು ಸೃಷ್ಟಿಸುವಂತಹ ತರಬೇತಿಯ ಮೇಲೆ ಅವಲಂಬಿತವಾಗಿರುತ್ತದೆ; ಮತ್ತು ಅವರು ಪಠ್ಯಪುಸ್ತಕವನ್ನು ವ್ಯಾಖ್ಯಾನಿಸುವ ವಿಧಾನ, ಆ ಪಠ್ಯಪುಸ್ತಕಗಳು ರಚಿಸಲ್ಪಟ್ಟ ರೀತಿಯಲ್ಲಿರುತ್ತದೆ. ಶಿಕ್ಷಣದ ಸಂಯೋಜಿತ ವಿಚಾರಗಳಿಗೆ ಸರಕಾರ ಕೊಡುವ ಪ್ರಾಮುಖ್ಯತೆಯು ಮತ್ತೊಂದು ಅತ್ಯಂತ ಪ್ರಮುಖ ಅಂಶವಾಗಿದೆ: ಇದು ಕೇವಲ ಬಾಯಿ ಮಾತಿನ ಉಪಚಾರವಾಗಿರದೆ, ತನ್ನ ಆಶಯವನ್ನು ಮಾತಿನಿಂದ ಕೃತಿಗೆ ಇಳಿಸುವ ಮೂಲಕ ಆಗಿರಬೇಕು.

ಶಿಕ್ಷಣ ಸಚಿವ, ಆ ಬಳಿಕ ಉಪ ಮುಖ್ಯಮಂತ್ರಿಯಾದ ಮನೀಷ್ ಸಿಸೋಡಿಯಾ ಅವರ ಈ ಪುಸ್ತಕವು, ಶಿಕ್ಷಣದ ಮೌಲ್ಯ ಕುರಿತ ತಮ್ಮ ಎಲ್ಲಾ ಆಶಯಗಳನ್ನು ಅಸ್ತಿತ್ವದಲ್ಲಿದ್ದ ಅಡೆತಡೆಗಳ ಮುರಿಯುವಿಕೆಗೆ ಹೇಗೆ ಬಳಸಿಕೊಂಡೆವು ಎಂಬುದನ್ನು ದೃಢವಾಗಿ ಪ್ರದರ್ಶಿಸುತ್ತಾ, ಹೇಗೆ ಆಪ್, ಶಿಕ್ಷಣವನ್ನು ತನ್ನ ಕಾರ್ಯಯೋಜನೆಯ ಕೇಂದ್ರ ವಿಷಯವನ್ನಾಗಿಸಿತು ಎಂಬುದನ್ನು ವಿವರಿಸುತ್ತದೆ.

ಈ ಪುಸ್ತಕವು ಎರಡು ಭಾಗಗಳಾಗಿ ವಿಂಗಡಿಸಲ್ಪಟ್ಟಿದೆ: **ಶಿಕ್ಷಣದ ಅಡಿಪಾಯ ಮತ್ತು ಅಡಿಪಾಯವಾಗಿ ಶಿಕ್ಷಣ**. ಮೊದಲ ಭಾಗವು ಸರಕಾರಿ ಶಾಲೆಗಳ ವಾಸ್ತವಿಕ ನಿರ್ವಹಣೆಯ ಬಗ್ಗೆ ಚರ್ಚಿಸುತ್ತದೆ. ಮನುಷ್ಯನ ಬೆಳವಣಿಗೆಯಲ್ಲಿ ಆನಂದವನ್ನು ಬಹು ಮುಖ್ಯ ಅಂಶವೆಂದು ಪರಿಗಣಿಸಿದರೆ, ಮೊದಲ ಆದ್ಯತೆಯಾಗಿ ವ್ಯಕ್ತಿಯ ಏಳಿಗೆ ಮತ್ತು ಆ ನಂತರವಷ್ಟೇ ಆರ್ಥಿಕ ಬೆಳವಣಿಗೆಯ ಸಾಧನವಾಗಿ ಯಶಸ್ವಿಯಾಗುವ ಅವನ/ಅವಳ ಸಾಮರ್ಥ್ಯವನ್ನು ನೋಡಲಾಗಿದೆ. ಲೇಖಕರು ಮೂಲಸೌಕರ್ಯ, ಶಿಕ್ಷಕರ ನೇಮಕಾತಿ, ತರಬೇತಿ, ಪ್ರಾಂಶುಪಾಲರು ಮತ್ತು ಪೋಷಕರ ಅಂಶಗಳನ್ನೂ ಈ ಸಂದರ್ಭದಲ್ಲಿ ಪರಿಗಣಿಸಿದ್ದಾರೆ. ಬಯಸಿದ ಬದಲಾವಣೆಯನ್ನು ಸಾಧ್ಯವಾಗಿಸಲು, ವಾಸ್ತವ ರೂಪದಲ್ಲಿ ಕಾರ್ಯರೂಪಕ್ಕೆ ತರಲು ಆರ್ಥಿಕ ಅವಶ್ಯಕತೆ ಇರುವುದರಿಂದ, ಈ ವಿಭಾಗವು ಆಯವ್ಯಯದ ಹೆಚ್ಚಳದೊಂದಿಗೆ ಪ್ರಾರಂಭವಾಗುತ್ತದೆ.

ಇದರ ಪರಿಣಾಮವಾಗಿ ದೆಹಲಿಯ ಸರಕಾರಿ ಶಾಲೆಗಳ ಶೈಕ್ಷಣಿಕ ಸನ್ನಿವೇಶವು-ಭೌತಿಕ ಮತ್ತು ಕಾರ್ಯಾಚರಣೆಯ ಎರಡೂ ಮಟ್ಟಗಳಲ್ಲಿ ಅತ್ಯಂತ ಸಕಾರಾತ್ಮಕ ಮತ್ತು ಆಶಾದಾಯಕವಾಗಿತ್ತು. ಉದಾಹರಣೆಗೆ, ಸ್ಫೂರ್ತಿಯೇ ಇಲ್ಲದೆ ಕಳಾಹೀನವಾಗಿದ್ದ ತರಗತಿ ಕೊಠಡಿಗಳನ್ನು, ಅಲ್ಲಿ ತಮ್ಮ ಬಹುಪಾಲು ಸಮಯವನ್ನು ಕಳೆಯುವ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಕಲಿಕೆಗೆ ಸೂಕ್ತವಾದ ಮನೋಭಾವವನ್ನು ಪಡೆಯುವಂತಹ ರೀತಿಯಲ್ಲಿ ಸುಂದರ-ಗೊಳಿಸಲಾಯಿತು.

ಸಂಬಳದಲ್ಲಿ ಹೆಚ್ಚಳ, ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪೋಷಕರು ಸೇರಿದಂತೆ ಎಲ್ಲಾ ಭಾಗೀದಾರರು ವ್ಯವಸ್ಥೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಪರಸ್ಪರ ಗೌರವಿಸುವುದನ್ನು ಮನೀಷ್ ಸಿಸೋಡಿಯಾ ಅವರ ಅಭಿವೃದ್ಧಿಯ ನಿರೂಪಣೆಯು ಒಳಗೊಂಡಿದೆ.

ನಾಗರಿಕನನ್ನು ರೂಪಿಸುವ ಪ್ರಕ್ರಿಯೆಯಲ್ಲಿ ಆಧ್ಯಾತ್ಮಿಕ ಬೆಳವಣಿಗೆಯ ಪಾತ್ರವನ್ನು ಎರಡನೆಯ ಭಾಗ – 'ಒಂದು ಅಡಿಪಾಯವಾಗಿ ಶಿಕ್ಷಣ'ವು ಒತ್ತಿಹೇಳುತ್ತದೆ. 'ಜೀವನ ವಿದ್ಯಾ' ಮತ್ತು 'ವಿಪಶ್ಯನ ಧ್ಯಾನ'ದಂತಹ ಕೋರ್ಸುಗಳನ್ನು ಬದಲಾವಣೆಯ ಸಾಧನಗಳೆಂದು ವಿವರಿಸಲಾಗಿದೆ. ತಮ್ಮನ್ನು ತಾವೇ ಒಪ್ಪಿಕೊಳ್ಳುವ ಕೌಶಲವನ್ನು ಕಲಿಸುವ ಮತ್ತು ಆಂತರ್ಯದ ಆನಂದವೇ ನಿಜವಾದ ಸಂಪತ್ತು ಎಂದು ತಿಳಿಸುವುದರ ಜೊತೆಗೆ ಆಶಾಭಾವವನ್ನು ಬೆಳೆಸುವ ಉತ್ಸಾಹ ತುಂಬುವ ಕಾರ್ಯಕ್ರಮಗಳೂ ಇರುತ್ತವೆ. ಇದು ಸಂಕುಚಿತ ಮತ್ತು ಸ್ವಕೇಂದ್ರಿತ ಗುರಿಗಳ ದೃಷ್ಟಿಕೋನಗಳಿಂದ ತಮಗೆ ಸಾಧ್ಯವಿರುವಷ್ಟು ಉತ್ತಮವಾಗಿ ಬದಲಾಗಲು ಮಕ್ಕಳನ್ನು ಶಕ್ತರನ್ನಾಗಿಸುತ್ತದೆ.

ಈ ಪುಸ್ತಕವು ಒಂದು ಆದರ್ಶ ಶಿಕ್ಷಣ ಕಾರ್ಯಕ್ರಮದ ಆಸಕ್ತಿದಾಯಕ ವಿವರಣೆಯಾಗಿದ್ದು, ಇದನ್ನು ಸಾಧಿಸಿದರೆ ಮತ್ತು ದೇಶದಾದ್ಯಂತ ಜಾರಿಗೆ ತಂದರೆ ಭವಿಷ್ಯದ ನಾಗರಿಕರು, ಚಾಣಾಕ್ಷ, ವಿಶ್ವಾಸನೀಯ ಮತ್ತು ಪ್ರಜ್ಞಾವಂತ ಕೆಲಸಗಾರರಾಗಿ, ನವ ಭಾರತವನ್ನು ಕಟ್ಟುವಂತಹ ಭರವಸೆಯನ್ನು ತುಂಬುತ್ತದೆ. ಬರವಣಿಗೆಯ ಶೈಲಿಯು ಸಂದರ್ಶಕರೊಬ್ಬರ ಜೊತೆ ಮಾತನಾಡಿದಂತೆ ಇದೆಯಲ್ಲಾ ಎಂದು ಯಾರಿಗಾದರೂ ಆಶ್ಚರ್ಯವಾಗುವಂತೆ ಸಂವಾದದ ಸ್ವರೂಪದಲ್ಲಿದೆ. ಅದೇನೇ ಇರಲಿ, ಈ ಪುಸ್ತಕವು ಉತ್ತಮವಾಗಿ ಓದಿಸಿಕೊಳ್ಳುತ್ತದೆ ಮತ್ತು ಅದು ಕಾರ್ಯರೂಪಕ್ಕೆ ಬಂದರೆ ಎಲ್ಲದಕ್ಕಿಂತಲೂ ಉತ್ತಮವಾಗಿರುತ್ತದೆ.




**ಶೀರ್ಷಿಕೆ:**
Shiksha: My Experiments as an Education Minister

**ಲೇಖಕರು:**
ಮನೀಷ್ ಸಿಸೋಡಿಯ

**ಪೇಪರ್ ಬ್ಯಾಕ್:**
೨೦೮ ಪುಟಗಳು

**ಬೆಲೆ:**
₹ ೨೨೨ ರೂ.

**ಪ್ರಕಾಶಕರು:**
ಪೆಂಗ್ವಿನ್ (೯ ಸೆಪ್ಟೆಂಬರ್ ೨೦೧೯)

**ಭಾಷೆ:**
ಇಂಗ್ಲಿಷ್

**ISBN -10:**
0143448528

**ISBN-13:**
978-0143448525

Amazon.in ನಲ್ಲೂ ಲಭ್ಯವಿದೆ



**ಪ್ರೇಮಾ ರಘುನಾಥ್** ಅವರು ಲರ್ನಿಂಗ್ ಕರ್ವ್‌ನ ಮುಖ್ಯ ಸಂಪಾದಕರು. ಚೆನ್ನೈನ ಕೇಂದ್ರ ಪ್ರೌಢ ಶಿಕ್ಷಣ ಮಂಡಳಿ (ಸಿಬಿಎಸ್‌ಇ) ಮತ್ತು ಐಬಿ (ಇಂಟರ್‌ನ್ಯಾಷನಲ್ ಬ್ಯಾಕಲೌರಿಯೇಟ್) ಶಾಲೆಗಳಲ್ಲಿ ಹಲವು ವರ್ಷ ಕಲಿಸಿದ ಅನುಭವ ಅವರದ್ದು. ಈಗ ಅವರು ಚೆನ್ನೈನ ಕೆಲವು ಶಾಲಾ ಸಮಿತಿಗಳಲ್ಲಿ ಇದ್ದಾರೆ. ಅವರನ್ನು ಇಲ್ಲಿ ಸಂಪರ್ಕಿಸಬಹುದು:
prema.raghunath@azimpremjifoundaton.org

ಅನುವಾದ: **ದೇವಿಕ ಧರ್ಮಿಷ್ಟೆ** । ಪರಿಶೀಲನೆ: **ಚಂದ್ರಶೇಖರ್ ಮಂಡೆಕೋಲು**